39 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿ.ಸಿ. ನಂ. 27030-2022

ಸಿಡಬ್ಲೂ -1 ಪಿಡಬ್ಲೂ- 1

ಸಾಕ್ಷಿದಾರರ ಹೆಸರು : ಅರ್ಚನಾ

ಗಂಡನ ಹೆಸರು : ನರೇಂದ್ರರೆಡ್ಡಿ

ವಯಸ್ಸು : 27 ವರ್ಷ

ಕೆಲಸ : ಗೃಹಿಣಿ

ವಾಸ : ಸದಾಶಿವನಗರ, ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 15-07-2023 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ಆರೋಪಿ ನನ್ನ ಗಂಡ. ಆರೋಪಿತನೊಂದಿಗೆ ನನ್ನ ಮದುವೆಯು ದಿ. 18-03-2016 ರಂದು ಸಂಜೀವಿನಿ ಸಮುದಾಯ ಭವನ ಚಿಂತಾಮಣಿಯಲ್ಲಿ ನಡೆದಿರುತ್ತದೆ. ಮದುವೆಯ ಸಮಯದಲ್ಲಿ ಆರೋಪಿ ಮತ್ತು ಅವರ ತಂದೆ-ತಾಯಿಯಾದ ವೆಂಕನಾರಾಯಣರೆಡ್ಡಿ ಮತ್ತು ಶಾಂತಮ್ಮ ನವರು ವರದಕ್ಷಿಣೆಯಾಗಿ 3 ಲಕ್ಷ ರೂ. ನಗದು ಹಣ, 25 ಸಾವಿರೂ. ಬಟ್ಟೆಗೆ ಮತ್ತು 50 ಗ್ರಾಂ ತೂಕದ ಚೈನ್, 7 ಗ್ರಾಂ ತೂಕದ ಉಂಗುರವನ್ನು ನೀಡಬೇಕು ಎಂದು ಕೇಳಿದ್ದರು. ಆ ಪ್ರಕಾರ ಅಷ್ಟು ಚಿನ್ನಾಭರಣ ಮತ್ತುಹ ಣವನ್ನು ನೀಡಿ ನನಗೆ ಮದುವೆ ಮಾಡಿ ಕೊಟ್ಟಿರುತ್ತಾರೆ.

3 ಲಕ್ಷರೂ. ನಗದು ಹಣವನ್ನು ಕೇಳಿರಲಿಲ್ಲ, 3 ಲಕ್ಷ ರೂ ಹಣವನ್ನು ಖರ್ಚು ಮಾಡಿ ಮದುವೆ ಮಾಡಿಕೊಡಬೇಕೆಂದು ಹೇಳಿದ್ದರು ಮದುವೆಯಾದ ನಂತರ ನನ್ನ ಗಂಡ ಮನೆಯ ಅಳಿಯನಾಗಿ ನನ್ನ ತವರು ಮನೆಯಲ್ಲಿ ವಾಸವಾಗಿದ್ದರು. ಆರೋಪಿ ತಂದೆಯವರ ಮನೆಯಲ್ಲಿ ವಾಸವಾಗಿದ್ದ ಕಾಲಕ್ಕೆ ಪ್ರತಿದಿನ ಕುಡಿದು ಬಂದು ನನಗೆ ಕೆಟ್ಟ ಶಬ್ದಗಳಿಂದ ಬೈದು, ಹಲ್ಲೆ ನಡೆಸುತ್ತಿದ್ದರು.

ಆರೋಪಿಯು ನನ್ನ ತಂದೆಯ ಮನೆಯಲ್ಲಿ ವಾಸ ಮಾಡಲು ಆಗುವುದಿಲ್ಲ ಎಂದು ಹೇಳಿದ್ದರಿಂದ ನನ್ನ ತಂದೆಯವರೇ ನಮಗೆ ಕೆ ಆರ್ ಪುರಂ ನಲ್ಲಿ ಬಾಡಿಗೆ ಮನೆಯನ್ನು ಮಾಡಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾವು ಮತ್ತು ನಮ್ಮ ಹೆಣ್ಣು ಮಗು ವಾಸ ಮಾಡುತ್ತಿದ್ದೇವು. ದಿ. 16-02-2022 ಮತ್ತು ದಿ. 17-02-2022 ರಂದು

ಆರೋಪಿತನು ಕೈಯಿಂದ ನನಗೆ ಹೊಡೆದು, ಕಾಲಿನಿಂದ ನನ್ನ ಗರ್ಭಕೋಶಕ್ಕೆ ಒದ್ದು ಹಲ್ಲೆ ನಡೆಸಿರುತ್ತಾನೆ. ಆರೋಪಿಯು ಕೈಯಿಂದ ನನ್ನ ಕುತ್ತಿಗೆಗೆ ಹಿಸುಗಿ ಪ್ರಾಣಭಯ ಒಡ್ಡಿ ಮನೆಯಿಂದ ಆಚೆ ಕಳುಹಿಸಿರುತ್ತಾರೆ. ನಂತರ ನಾನು ಮನೆಯಿಂದ ತೆರಳಿ ನನ್ನ ತಂದೆಯ ಮನೆಗೆ ಬಂದರುತ್ತೇನೆ.

ದಿ. 18-02-2022 ರಂದು ನನಗೆ ನೋವು ಸಹಿಸಲಾಗದೇ ಕೆ ಸಿ ಜನರಲ್ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿಪಿ. 1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು.

( ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

39 ನೇ ಅ. ಮು. ಮ. ದಂ. ನ್ಯಾ